**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ಪೊನ್ನಂಪೇಟೆ.**

ಸಿ.ಸಿ. ನಂ. **921/2020** ಪ್ರಾ.ಸಾ **–3**
ಚಾ.ಸಾ **– 9**

ದಿನಾಂಕಃ **17.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಬಿ ಎಸ್ ಮೋಹನ್ ಕುಮಾರ್ |
| ತಂದೆಯ ಹೆಸರು | : | ಲೇಟ್ ಬಿ ಎಂ ಸುಬ್ಬಯ್ಯ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಅಬಕಾರಿ ಉಪ ನಿರೀಕ್ಷಕರು |
| ವಾಸ ಸ್ಥಳ | : | ಪಿರಿಯಾಪಟ್ಟಣ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು 2018 ಅಕ್ಟೋಬರ್ ರಿಂದ 2025 ಅಕ್ಟೋಬರ್ ರ ತನಕ ವಿರಾಜಪೇಟೆ ಉಪವಲಯದಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 29.05.2020 ರಂದು ಸದರಿ ಪ್ರಕರಣಕ್ಕೆ ಸಂಬಂದಿಸಿದ ದಾಖಲಾತಿ ಮತ್ತು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ತೆಗೆದ ಕಳ್ಳಬಟ್ಟಿಯನ್ನು ಸಾರಾಯಿಯನ್ನು ಮುಂದಿನ ತನಿಖೆಗಾಗಿ ಚಾಸಾ 7 ರವರಿಂದ ಪಡೆದುಕೊಂಡಿರುತ್ತೇನೆ.

ದಿ. 12.06.2020 ರಂದು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ತೆಗೆದ ಕಳ್ಳಬಟ್ಟಿಯನ್ನು ಸಾರಾಯಿಯನ್ನು ಚಾಸಾ 6 ರವರ ಮುಖಾಂತರ ರಾಸಾಯನಿಕ ವಿಶ್ಲೇಷಣೆಗಾಗಿ ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿ. 13.07.2020 ರಂದು ರಾಸಾಯನಿಕ ವಿಶ್ಲೇಷಣೆ ವರದಿಯನ್ನು ಪಡೆದು ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ. ದಿ. 18.08.2020 ರಂದು ಸಾಕ್ಷಿದಾರಾರದ ಚಾಸಾ 1 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ. 29.09.2020 ರಂದು ಆರೋಪಿ ವಿರುದ್ಧ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**CC. No. 921/2020** **PW - 3**

ಸಾಕ್ಷಿಯು FSL ಗೆ ಮಾಡಿದ ಮನವಿ ಹಾಗೂ FSL ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 7 ಮತ್ತು 8 ಎಂದು ಸಹಿಯನ್ನು ನಿ ಪಿ 7(ಎ)ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಡಿ. ಆರ್ ಜೆ ವಕೀಲರಿಂದಃ

ನಾನು FSL ಗೆ ಯಾವುದೇ ವಸ್ತುವನ್ನು ಈ ಪ್ರಕರಣದಲ್ಲಿ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಆರೋಪಿಸಿದಂತೆ ಯಾವುದೇ ಕೃತ್ಯ ಮಾಡಿಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಗಳಿಗೋಸ್ಕರು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

sd/-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ